ಸಂಗಮ, ಕೆ. ಶಿವರಾಮ ಕಾರಂತ, ಅ.ನ.ಕೃ., ವಿ.ಸೀ., ಮೊದಲಾದ ಹಲವರು ಆಗ ಬರೆದಿದ್ದರು. ನಂತರದ ದಿನಗಳಲ್ಲಿ ಹಲವು ಬೆಳವಣಿಗೆಗಳ ಕಾರಣದಿಂದ ಕಲಾವಿದರೇ ಬರೆಯಲಾರಂಭಿಸಿದ ಪರಂಪರೆಯು ಮುಖ್ಯವಾದದ್ದು. ಅಂದರೆ, ಆವರೆಗೆ ಚಿತ್ರ, ಸಂಗೀತ, ನೃತ್ಯ, ನಾಟಕಗಳನ್ನು ಕುರಿತು ಒಬ್ಬರೇ ಬರೆಯುತ್ತಿದ್ದ ಪರಂಪರೆಯನ್ನು ಬಿಟ್ಟು ಚಿತ್ರಕಲಾವಿದರೇ ಬರೆಯಲಾರಂಭಿಸಿದ ಬೆಳವಣಿಗೆ. ಬಹುಮುಖ್ಯವಾಗಿ ಕನ್ನಡದ ಪತ್ರಿಕಾರಂಗವು ನೀಡಿದ ಪ್ರೋತ್ಸಾಹವು ದೃಶ್ಯಕಲಾ ಬರವಣಿಗೆಗೆ 'ವೇಗವರ್ಧಕ'ವಾಗಿ ಕಂಡಿತು. 'ಲೋಕವಾಣಿ', 'ಜನವಾಣಿ', 'ಪ್ರಜಾವಾಣಿ', 'ಕನ್ನಡಪ್ರಭ', 'ಸಂಯುಕ್ತ ಕರ್ನಾಟಕ', 'ಉದಯವಾಣಿ' ಇತ್ಯಾದಿ ಪತ್ರಿಕೆಗಳ ಹಲವು ಸಂಪಾದಕರು ಆ ಸಂದರ್ಭದಲ್ಲಿ ನನ್ನಂತಹ ಹಲವರಿಗೆ ಅವಕಾಶ ನೀಡಿ ಪ್ರೋತ್ಸಾಹಿಸಿದ್ದಾರೆ. ಬೆಂಗಳೂರು, ಧಾರವಾಡ, ಕಲ್ಬುರ್ಗಿಗಳಿಂದ ಕಲಾಪತ್ರಿಕೆಗಳು ಆರಂಭಗೊಂಡಿದ್ದವು. ಕಲಾಮಂದಿರದ ಅ.ನ. ಸುಬ್ಬರಾಯರ ಸಂಪಾದಕತ್ವದ 'ಕಲಾ' ಪತ್ರಿಕೆಯು 1920ರಲ್ಲಿಯೇ ಆರಂಭಗೊಂಡಿತ್ತು. ಆದರೆ, ಇಂದು ಬರೆಯದ, ಬರೆಸದ, ಬರಹದ ರಾಜಕಾರಣವನ್ನು ಮೀರಿ ದೃಶ್ಯಕಲಾ ಬರವಣಿಗೆಯು ಮುನ್ನಡೆಯಬೇಕಿದೆ.

◆ **'ಕಲಾ ವಿಮರ್ಶೆ' ಎಂಬ ಕೆಟಗರಿಯಲ್ಲಿ ಬಹಳಷ್ಟು ಬರವಣಿಗೆ ಮಾಡಿದ್ದೀರಿ. ಅದು ಸಾಹಿತ್ಯ ವಿಮರ್ಶೆಗಿಂತ ಹೇಗೆ ಭಿನ್ನ? ಮತ್ತು ಯಾಕೆ?**

ನಮ್ಮಲ್ಲಿ ದೃಶ್ಯಕಲಾ ವಿಮರ್ಶೆಯ ಪರಂಪರೆ ಇಲ್ಲ. ಈ ಹಿಂದೆ ನಮ್ಮ ಕಲೆಯು 'ಪರೋಕ್ಷ'ವಾದ ದೈವೀಕ ದೃಷ್ಟಿಯದ್ದೇ ಆಗಿತ್ತು. ಹಾಗಾಗಿ ದೈವಮೂಲದ ಸೃಷ್ಟಿಶೀಲತೆಯಲ್ಲಿ ಸರಿ ತಪ್ಪುಗಳನ್ನು ವಿಮರ್ಶಿಸುವುದು ಸಾಧ್ಯವಿರಲಿಲ್ಲ. ನಮ್ಮ ಅಂದಿನ ಸಾಂಪ್ರದಾಯಿಕ 'ಚಿತ್ರಸೂತ್ರ', 'ಚಿತ್ರಲಕ್ಷಣ' ಇತ್ಯಾದಿ ಯಾವುದೇ ಕಲಾಪಠ್ಯಗಳಲ್ಲಿಯೂ ವಿಮರ್ಶೆಯ ಮಾನದಂಡಗಳಿಲ್ಲ. ಅಲ್ಲಿರುವುದೆಲ್ಲ ಕಲಾಸೃಷ್ಟಿಯ ವಿವರಗಳು. ನಮ್ಮ ಭಾಷಾ ಸಾಹಿತ್ಯಕ್ಕೆ ಸಂಸ್ಕೃತ ಮೀಮಾಂಸೆಯ ಪರಂಪರೆಯಾದರೂ ಇದೆ. ಆದರೂ ಇಂದಿನ ನಮ್ಮ ಕನ್ನಡ ಭಾಷಾ ಸಾಹಿತ್ಯ ವಿಮರ್ಶೆಯು ಬಹುತೇಕ ಪಶ್ಚಿಮ ಮತ್ತು ಯುರೋಪು ಮೂಲದ್ದೇ ಆಗಿದೆ. ಸುದೀರ್ಘ ಇತಿಹಾಸವೂ ಇದೆ. ಕಲಾವಿದ ಕೆ.ಜಿ. ಸುಬ್ರಮಣ್ಯನ್ ಹೇಳುವಂತೆ ದೃಶ್ಯಕಲಾ ವಿಮರ್ಶೆಗೆ ಸುಮಾರು ನೂರು ವರ್ಷಗಳ ಇತಿಹಾಸವಿದೆ. ಅದೂ ಪಶ್ಚಿಮ ಮತ್ತು ಯುರೋಪು ಮೂಲದ್ದೇ ಆಗಿದೆ. ಅಲ್ಲಿನ ಸಾಹಿತ್ಯ ಮತ್ತು ದೃಶ್ಯಕಲಾರಂಗಗಳ ಬೆಳವಣಿಗೆಗಳು ಬಹುತೇಕ ಪರಸ್ಪರ ಪೂರಕವಾಗಿಯೇ ಇವೆ. ಅಲ್ಲಿನ ಎಷ್ಟೋ ಲೇಖಕರು ಕಲಾವಿಮರ್ಶಕರೂ, ಕಾದಂಬರಿಕಾರರೂ, ಕವಿಗಳೂ ಆಗಿರುವುದುಂಟು. ನಮ್ಮಲ್ಲಿ ಹಾಗೆ ಆಗಲಿಲ್ಲ. ಸಾಹಿತ್ಯ ವಿಮರ್ಶೆಯು ಹೊರಗಿನ ಚಳವಳಿ, ಪಾರಿಭಾಷಿಕ

